**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 71/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶಿವಮಾದಯ್ಯ ಎಂ. | ಪ್ರಾಸಾಃ 2 |
| ತಂದೆಯ ಹೆಸರು | | ಮಾದಯ್ಯ | ಚಾಸಾಃ 1 |
| ವಯಸ್ಸು | | 51 ವರ್ಷ | |
| ಕೆಲಸ | | ವೃತ್ತ ನಿರೀಕ್ಷಕರು,ಚೆಸ್ಕಾಂ ಜಾಗೃತ ದಳ, ಮೈಸೂರು | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 07.03.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಕವಲಂದೆ ಪೋಲಿಸ್ ಠಾಣೆಯಲ್ಲಿ 28.05.2016 ರಿಂದ 28.12.2017 ವರೆಗೂ ಸಬ್ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16.03.2017 ರಂದು ಚುನಾವಣಾ ಸಂಬಂಧ ಮೇಲಾಧಿಕಾರಿಗಳ ಆದೇಶದ ಮೇರೆಗೆ ಠಾಣಾ ವ್ಯಾಪ್ತಿಯಲ್ಲಿ ಗಸ್ತಿನಲ್ಲಿ ಇದ್ದಾಗ ಹೆಡತಲೆ ಗ್ರಾಮದಲ್ಲಿ ಇರುವ ಎಂ.ಎಸ್.ಐ.ಎಲ್. ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ಬಂದ ಮೇರೆಗೆ ಪಂಚರಾದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಈ ವಿಷಯವನ್ನು ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡ ಮೇರೆಗೆ ನಮ್ಮ ಸಿಬ್ಬಂದಿಯಾದ ಚಾಸಾ-6 ರಿಂದ 8 ರವರನ್ನು ಕರೆದುಕೊಂಡು ಇಲಾಖಾ ಜೀಪ್ ಸಂಖ್ಯೆ ಕೆಎ-55-ಜಿ-10 ರಲ್ಲಿ ರಾತ್ರಿ 9.15 ಗಂಟೆಗೆ ಠಾಣೆಯಿಂದ ಹೊರಟು 9.45 ಗಂಟೆಗೆ ಘಟನಾ ಸ್ಥಳ ತಲುಪಿ ಹೆಡತಲೆ ಗ್ರಾಮದ ಎಂ.ಎಸ್.ಐ.ಎಲ್. ಅಂಗಡಿಗೆ ಹೊಂದಿಕೊಂಡಿರುವ ಇಬ್ಬರು ಆಸಾಮಿಗಳು ಆಚೆ ಬಂದಾಗ ಅವರುಗಳನ್ನು ಸಿಬ್ಬಂದಿ ಸಹಾಯದಿಂದ ಹಿಡಿದುಕೊಂಡಾಗ ಇತರೆ 4-5 ಜನ ವ್ಯಕ್ತಿಗಳು ಓಡಿ ಹೋಗಿರುತ್ತಾರೆ. ಸದರಿ ಅಂಗಡಿ ಮಳಿಗೆಯನ್ನು ಪರಿಶೀಲಿಸಿದಾಗ ಅಂಗಡಿಯ ಮೂಲೆಯಲ್ಲಿ ಒಂದು ರಟ್ಟಿನ ಡಬ್ಬವಿದ್ದು ಅದರಲ್ಲಿ original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳು ಇದ್ದು ಅದರ ಪಕ್ಕದಲ್ಲಿ ಪ್ಲಾಸ್ಟಿಕ್ ಲೋಟ ಮತ್ತು ನೀರಿನ ಜಗ್ ಇಟ್ಟಿದ್ದರು. ಆ ಇಬ್ಬರು ವ್ಯಕ್ತಿಗಳಿಗೆ ಲೈಸನ್ಸ್ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿರುತ್ತಾರೆ. ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಅವುಗಳನ್ನು ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆರೋಪಿತರನ್ನು ಅವರ ಹೆಸರು ಮತ್ತು ವಿಳಾಸ ಕೇಳಿದಾಗ ಅವರುಗಳು ತಮ್ಮ

ಹೆಸರು ರಾಜಪ್ಪ ಬಿನ್ ಗುರುಮಲ್ಲಪ್ಪ, ಹನುಮನಪುರ ಮತ್ತು ಮಂಜುನಾಥ ಬಿನ್ ಸಿದ್ದರಾಮನಾಯ್ಕ , ಹೆಡತಲೆ ಎಂದು ತಿಳಿಸಿದರು.

ಪಂಚರ ಸಮಕ್ಷಮ 10 ಪ್ಲಾಸ್ಟಿಕ್ ಲೋಟ, 2 ಲೀಟರ್ ಸಾಮರ್ಥದ 4 ನೀರಿನ ಬಾಟಲ್ , 2 ಪ್ಲಾಸ್ಟಿಕ್ ಜಗ್ ಗಳು, ರಟ್ಟಿನ ಡಬ್ಬದಲ್ಲಿ ಇದ್ದ 5 ಖಾಲಿ ಟೆಟ್ರಾ ಪ್ಯಾಕೆಟ್ ಗಳು ಮತ್ತು original choice ವಿಸ್ಕಿಯ 90 ಎಂ.ಎಲ್. ನ 42 ಪೌಚುಗಳನ್ನು ರಾತ್ರಿ 10.00 ರಿಂದ 10.45 ರ ವರೆಗೆ ಪಂಚನಾಮೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇವೆ. ಈಗ ನನಗೆ ತೋರಿಸಿದ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಅಮಾನತ್ತು ಪಂಚನಾಮೆಯನ್ನು ನಿಪಿ-1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ರುಜುವನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

42 ಪೌಚುಗಳ ಪೈಕಿ 28 ಪೌಚುಗಳನ್ನು ರಾಸಯನಿಕ ಪರೀಕ್ಷೆಗೆ ಆರ್. ಎಂಬ ಅಕ್ಷರದಿಂದ ಸೀಲು ಮಾಡಿ ಪ್ರತ್ಯೇಕವಾಗಿ ತೆಗೆದಿರಿಸಲಾಗಿರುತ್ತದೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ನಂತರ ವಶಕ್ಕೆ ಪಡೆದ ಆರೋಪಿತರು, ಮುದ್ದೆಮಾಲು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಹಿಂದಿರುಗಿ ಸರ್ಕಾರದ ಪರವಾಗಿ ಆರೋಪಿತರ ವಿರುದ್ದ ಸ್ವ-ಪಿರ್ಯಾದನ್ನು ಚಾಸಾ-9 ರವರಿಗೆ ನೀಡಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ನೀಡಿರುವ ಸ್ವ-ಪಿರ್ಯಾದಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಸದರಿ ನಿವೇದನಾ ಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ರುಜುವನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿನಾಂಕ 17.03.2017 ರಂದು ಸಾಕ್ಷಿದಾರರಾದ ಚಾಸಾ-2, 3, 6 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 18.05.2017 ರಂದು ವಶಪಡಿಸಿಕೊಂಡ 28 ಮದ್ಯದ ಪೌಚುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ನಮ್ಮ ಠಾಣೆಯ ಶ್ರೀ ಮಹೇಶ್ ಪಿ.ಸಿ.192 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ.

ದಿನಾಂಕ 26.08.2017 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು DYSP ಕಛೇರಿಯಿಂದ ಸ್ವೀಕರಿಸಿರುತ್ತೇನೆ.

ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯು ನಾನು ಸ್ವೀಕರಿಸಿದ ರಾಸಾಯನಿಕ ವಿಶ್ಲೇಷಣಾ

ವರದಿಯಾಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಈಗಾಗಲೇ ನಿಪಿ-3 ಎಂದು, ಸಾಕ್ಷಿಯ ರುಜುವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

( ಪ್ರಜ್ಞ ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**